ದಿನಾಂಕಃ **11-02-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಬಿ.ಎಂ.ಎಸ್.ರವರಿಂದ ಃ</u>

**1.** ನಾನು ವ್ಯವಸಾಯಗಾರ. ನನ್ನ ಚಿಕ್ಕಪ್ಪನಿಂದ ನನಗೆ ವ್ಯವಸ್ಥಾ ಪತ್ರದ ಮೂಲಕ ಸರ್ವೆ ನಂಃ268 ಬಂದಿದ್ದು, ಸದರಿ ಜಮೀನು ನನಗೆ ಸೇರಬೇಕು ಎಂದು ಈ ದಾವೆಯನ್ನು ಹಾಕಿದ್ದೇನೆ. ದಾವಾ ಸ್ವತ್ತಿನ ಸರ್ವೆ ನಂಃ68, ಅದರ ವಿಸ್ತೀರ್ಣ 24 ಗುಂಟೆ ಇದೆ. ಸರ್ವೆ ನಂಃ68 ನ್ನು ನನ್ನ ಚಿಕ್ಕಪ್ಪ ನನಗೆ ಬರೆದುಕೊಟ್ಟಿದ್ದ. ಸರ್ವೆ ನಂಃ68 ನ್ನು ನನ್ನ ಚಿಕ್ಕಪ್ಪ ನನಗೆ ಬರೆದುಕೊಟ್ಟ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಈಗಾಗಲೇ ಕೊಟ್ಟಿದ್ದೇನೆ. ಸ್ವತ್ತನ್ನು ಎಷ್ಟು ಮೊತ್ತಕ್ಕೆ ಖರೀದಿಸಿದೆ ಎಂದು ನನಗೆ ಈಗ ನೆನಪಿಲ್ಲ. ಕ್ರಯವಾದ ಸ್ವತ್ತಿನ ಚೆಕ್ಕುಬಂದಿ ಪೂಃ ಕೋಟೇಗೌಡರ ಜಮೀನು, ಪಃ ಹಳೆಬೀಡು ಕಾಳೇಗೌಡರ ಜಮೀನು, ಉಃ ಸರ್ಕಾರಿ ಘಾರಂ, ದಃ ಕುಳ್ಳೇಗೌಡರ ಮಗ ರಾಮೇಗೌಡರ ಜಮೀನು ಇದೆ. ಪ್ರತಿವಾದಿಗಳು ನಾನು ಸ್ವತ್ತಿನಲ್ಲಿ ಬೆಳೆ ಮಾಡುತ್ತಿದ್ದಾಗ ಬಂದು ತಮಗೆ ಕ್ರಯವಾಗಿದೆ ಎಂದು ಗಲಾಟೆ ಮಾಡುತ್ತಿದ್ದರು, ಆ ಕಾರಣ ಈ ದಾವೆಯನ್ನು ಹಾಕಿದ್ದೇನೆ. ನಾನು ಸರ್ವೆ ನಂಃ68 ಕ್ಕೆ ಸಂಬಂದಿಸಿದಂತೆ ಪ್ರತಿವಾದಿಗಳ ವಿರುದ್ದ ದಾವೆ ಹೂಡಿಲ್ಲ. ಸರ್ವೆ ನಂಃ268 ಕ್ಕೆ ದಾವೆ ಹಾಕಿದ್ದೇನೆ.

**2**. ಸರ್ವೆ ನಂಃ268 ರ ಸ್ವತ್ತು ನನ್ನ ಚಿಕ್ಕಪ್ಪನಿಂದ ನಾನು ಕ್ರಯಕ್ಕೆ ತೆಗೆದುಕೊಂಡಿದ್ದೇನೆ. 1972 ರಲ್ಲಿ ಕ್ರಯ ಪಡೆದೆ. 1972 ರಲ್ಲಿ ರೂ.5,000/-ವನ್ನು ಕೊಟ್ಟು ಸ್ವತ್ತನ್ನು ಖರೀದಿಸಿದೆ. ಸದರಿ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಯಾವುದೇ ಕ್ರಯ ಪತ್ರವನ್ನು ಹಾಜರುಪಡಿಸಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಮ್ಮ ಊರಿನವರು. ಪ್ರತಿವಾದಿಗಳ ದೊಡ್ಡಪ್ಪ ಕೋಟೇತಿಮ್ಮೇಗೌಡನಿಗೆ ನಾನು 1972 ರಲ್ಲಿ ನೊಂದಾಯಿತ ಕ್ರಯ ಪತ್ರದ ಮೂಲಕ ದಾವಾ ಸ್ವತ್ತನ್ನು ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ದೊಡ್ಡಪ್ಪ ಕೋಟೇತಿಮ್ಮೇಗೌಡರಿಗೆ 1972 ರಲ್ಲಿ ನಾನು ದಾವಾ ಸ್ವತ್ತನ್ನು ಮಾರಾಟ ಮಾಡಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**3**. ಪ್ರತಿವಾದಿಗಳ ದೊಡ್ಡಪ್ಪನ ಮಕ್ಕಳಾದ ಜಯಮ್ಮ ಮತ್ತು ಸೌಭಾಗ್ಯಮ್ಮ ನನ್ನ ವಿರುದ್ಧ ಅಸಲು ದಾವಾ ಸಂಖ್ಯೆ: 9/2022 ಎಂದು ಹಕ್ಕು ಘೋಷಣೆ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಅಸಲು ದಾವಾ ಸಂಖ್ಯೆ: 9/2022 ರಲ್ಲಿ ನಾನು ವಕೀಲರ ಮೂಲಕ ಹಾಜರಾಗಿದ್ದೇನೆ ಎಂದರೆ ಸರಿಯಲ್ಲ. ನಾನು ಸದರಿ ದಾವೆಯಲ್ಲಿ ತಕರಾರನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ: 9/2022 ರಲ್ಲಿ ನಾನು ಪ್ರತಿರಕ್ಷೆಯನ್ನು ಸಲ್ಲಿಸದ ಕಾರಣ ನನ್ನ ವಿರುದ್ಧವಾಗಿ ಡಿಕ್ರಿಯಾಗಿದೆ ಎಂದರೆ ಸರಿಯಲ್ಲ. 1972 ರಲ್ಲಿ ವ್ಯವಸ್ಥಾ ಪತ್ರದ ಮೂಲಕ ನನ್ನ ಚಿಕ್ಕಪ್ಪನಿಂದ ದಾವಾ ಸ್ವತ್ತು ನನಗೆ ಬಂದಿದೆ ಎಂದರೆ ಸರಿಯಲ್ಲ. ಹಳೆಬೀಡು ಗ್ರಾಮದ ಹೆಳವೇಗೌಡರ ಮಗ ಶಿವಣ್ಣೇಗೌಡ ನನಗೆ ಗೊತ್ತಿಲ್ಲ. ಶಿವಣ್ಣೇಗೌಡ ನನಗೆ ಗೊತ್ತಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಳೆಬೀಡು ಗ್ರಾಮದ ಹೆಳವೇಗೌಡರ ಮಗ ಶಿವಣ್ಣೇಗೌಡರಿಗೆ ದಾವಾ ಸ್ವತ್ತನ್ನು 1972 ರಲ್ಲಿ ನಾನು ರೂ.600/-ಕ್ಕೆ ಆದಾರ ಮಾಡಿದ್ದೆ ಎಂದರೆ ಸರಿಯಲ್ಲ. ಹೊಸೂರು ಗ್ರಾಮದ ಕೆಂಚೇಗೌಡರ ಮಗ ರಾಮೇಗೌಡರ ಬಳಿ ರೂ.1,200/- ಸಾಲ ಮಾಡಿದ್ದೆ, ಅದನ್ನು ತೀರಿಸುವ ಸಲುವಾಗಿ ಹಾಗೂ ಮನೆ ಕಟ್ಟುವ ಉದ್ದೇಶಕ್ಕಾಗಿ ದಾವಾ ಸ್ವತ್ತನ್ನು ಪ್ರತಿವಾದಿಗಳ ದೊಡ್ಡಪ್ಪನಿಗೆ ಕ್ರಯಕ್ಕೆ ಕೊಟ್ಟೆ ಎಂದರೆ ಸರಿಯಲ್ಲ. ದಿ: 01.05.1973 ರಲ್ಲಿ ನೊಂದಾಯಿತ ಕ್ರಯ ಪತ್ರದ ಮೂಲಕ ಪ್ರತಿವಾದಿಗಳ ದೊಡ್ಡಪ್ಪನಿಗೆ ದಾವಾ ಸ್ವತ್ತನ್ನು ಕ್ರಯಕ್ಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನಾನು ಶಿವಣ್ಣೇಗೌಡರಿಗೆ ಆದಾರ ಮಾಡಿರುವ ಬಗ್ಗೆ Index of Land ನಲ್ಲಿ ನಮೂದು ಇದೆ ಎಂದರೆ ಸರಿಯಲ್ಲ. 1973 ರ ಕ್ರಯ ಪತ್ರದ ಪ್ರಕಾರ ಎಂ.ಆರ್. ನಂ:1/259-1973-74 ರಂತೆ ಪ್ರತಿವಾದಿಗಳ ದೊಡ್ಡಪ್ಪನ ಹೆಸರಿಗೆ ಸ್ವತ್ತಿನ ದಾಖಲೆ ಇಂಡೀಕರಣವಾಗಿದ್ದು, ಪಹಣಿ ನಮೂದಾಗಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ದೊಡ್ಡಪ್ಪ 1975 ರಲ್ಲಿ ತೀರಿಕೊಂಡರು ಎಂದರೆ ಸರಿ. ಆ ನಂತರ ಪಹಣಿಗಳಲ್ಲಿ ನನ್ನ ಹೆಸರೆ ಮುಂದುವೆದಿದ್ದು ಪ್ರತಿವಾದಿಗಳ ದೊಡ್ಡಪ್ಪನ ಹೆಸರು ಮುಂದುವರೆಯಲಿಲ್ಲ ಎಂದರೆ ಸರಿಯಲ್ಲ. 1973 ರಿಂದ ಇಂದಿನ ವರೆಗೂ ಪ್ರತಿವಾದಿಗಳು ಮತ್ತು ಅವರ ದೊಡ್ಡಪ್ಪನ ಮಕ್ಕಳು ದಾವಾ ಸ್ವತ್ತಿನಲ್ಲಿ ಮಾಲೀಕರಾಗಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಎಲ್ಲ ವಿಚಾರಗಳು ನನಗೆ ಗೊತ್ತಿದ್ದರು ಸಹ, ಪಹಣಿಯಲ್ಲಿ ನನ್ನ ಹೆಸರು ಮುಂದುವರೆದಿರುವುದನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿ:21.01.2023 ರಲ್ಲಿ ಅಸಲು ದಾವಾ ಸಂಖ್ಯೆ: 9/2022 ರ ಡಿಕ್ರಿಯಾಗಿದೆ ಎಂದರೆ

ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ, ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ಎಂದಿಗೂ ಸ್ವಾದಿನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ಕಬ್ಬು ಮತ್ತು ತರಕಾರಿಗಳನ್ನು ಬೆಳೆದಿದ್ದೇನೆ. ಸದರಿ ವಿಚಾರವನ್ನು ನನ್ನ ವಾದ ಪತ್ರದಲ್ಲಿ ಹೇಳಿಲ್ಲ. ದಾವಾ ಸ್ವತ್ತಿನಲ್ಲಿ ಬೋರ್ ವೆಲ್ ತೆಗೆಸಿದ್ದೇನೆ, ಅದರ ಆದಾರದ ಮೇಲೆ ಬೆಳೆ ಬೆಳೆದಿದ್ದೇನೆ. ಬೋರ್ ವೆಲ್ ಅನ್ನು ಯಾವಾಗ ತೆಗೆಸಿದೆ ನೆನಪಿಲ್ಲ. ನಾನು ಯಾವುದೇ ಬೋರ್ ವೆಲ್ ಅನ್ನು ದಾವಾ ಸ್ವತ್ತಿನಲ್ಲಿ ತೆಗೆಸಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬೋರ್ ವೆಲ್ ಗೆ ವಿದ್ಯುತ್ ಸಂಪರ್ಕ ಪಡೆದುಕೊಂಡಿಲ್ಲ. ನನ್ನ ಅಣ್ಣ ಕೋಟೆತಿಮ್ಮೇಗೌಡನಿಗೆ ಜಮೀನು ಕೊಟ್ಟಿದ್ದಾನೆ, ಅದರ ಪಕ್ಕದ ಜಮೀನು ನನಗೆ ಸೇರಿದ್ದು, ಅದರಲ್ಲಿ ನಾನು ಏತ ನಿರಾವರಿ ಮೂಲಕ ಬೆಳೆ ಬೆಳೆಯುತ್ತಿದ್ದೇನೆ. ಈಗ ದಾವಾ ಸ್ವತ್ತಿನಲ್ಲಿ ನೀರಿನ ವ್ಯವಸ್ಥೆ ಇಲ್ಲ. ಈಗ ದಾವಾ ಸ್ವತ್ತಿನಲ್ಲಿ ಯಾವುದೇ ಬೆಳೆ ಬೆಳೆಯದೆ ತೆಕ್ಕಲು ಬಿದ್ದಿದೆ. ದಾವಾ ಸ್ವತ್ತಿನಲ್ಲಿ ಏನು ಬೆಳೆ ಬೆಳೆದಿದ್ದೆವು ಎಂದು ಈಗ ಹೇಳಲು ಆಗುವುದಿಲ್ಲ. ನಾನು ದಾವಾ ಸ್ವತ್ತಿನಲ್ಲಿ ಬೆಳೆ ಸಹ ಬೆಳೆದಿಲ್ಲ, ಸ್ವಾದೀನದಲ್ಲಿಯೂ ಇಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ. ಹೇ. ಕೇ. ಸ. ಇದೆ.**

**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಪಾಂಡವಪುರ.**

**ಸಾಕ್ಷಿದಾರರ ಸಹಿ.**